# ಬೆಂಗಳೂರು

# ಕೆನರಾ ಬ್ಯಾಂಕ್- ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿ ಒಡಂಬಡಿಕೆ

**ಬೆಂಗಳೂರು:** ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ನಗರದ ಕ್ರೆಡಿಟ್ ರೇಟಿಂಗ್ ಸಂಸ್ಥೆಯಾದ 'ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿ'ಯೊಡನೆ ವಿವಿಧ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಮಂಗಳವಾರ ಪಾಲುದಾರಿಕೆ ಒಡಂಬಡಿಕೆ ಮಾಡಿಕೊಂಡಿತು.

ಕೆನರಾ ಬ್ಯಾಂಕ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆರ್.ಕೆ. ದುಬೆ ಅವರು ಒಡಂಬಡಿಕೆ ಪತ್ರಕ್ಕೆ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಸಹಿ ಹಾಕಿ ಮಾತನಾಡಿದರು. ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿಯಲ್ಲಿ ಶೇ.10ರಷ್ಟು ಪಾಲನ್ನು ಬ್ಯಾಂಕು ಹೊಂದಲಿದ್ದು, ಬ್ಯಾಂಕು ಹಾಗೂ ಏಜೆನ್ಸಿ ಇನ್ನು ಮುಂದೆ ದರಕ್ಕೆ ಸಂಬಂಧಿಸಿದಂತೆ ಹಲವಾರು ಚಟುವಟಿಕೆಗಳಲ್ಲಿ ಸಹಯೋಗ ವಹಿಸಲಿವೆ. ಈ ಒಪ್ಪಂದದಿಂದ ಹೂಡಿಕೆ, ಅಪಾಯ ನಿರ್ವಹಣೆ ಮೇಲೆ ಸಂಶೋಧನೆ, ತರಬೇತಿ, ಆರ್ಥಿಕ ಸೇರ್ಪಡೆ, ಕ್ರೆಡಿಟ್ ರೇಟಿಂಗ್ ಮಾದರಿ, ಈವೆಂಟ್ಸ್ ಮುಂತಾದ ಸಂಗತಿಗಳು ಹೆಚ್ಚಿನ ಮಹತ್ವ ಪಡೆಯಲಿವೆ ಎಂದು ಹೇಳಿದರು.

ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಕುಲಕರ್ಣಿ ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶತಮಾನಗಳ ಇತಿಹಾಸವುಳ್ಳ ಪ್ರತಿಷ್ಠಿತ ಕೆನರಾ ಬ್ಯಾಂಕ್ ಜೊತೆಯಲ್ಲಿ ಕೆಲಸ ಮಾಡಲು ನಮ್ಮ ಸಂಸ್ಥೆ ಉತ್ಸುಕವಾಗಿದೆ. ಈ ಕ್ಷೇತ್ರದಲ್ಲಿ ಸಂಶೋಧನೆ, ತರಬೇತಿ ಹಾಗೂ ಆರ್ಥಿಕ ಸಾಕ್ಷರತೆಗೆ ಬದ್ಧವಾಗಿ ಕೆಲಸ ಮಾಡುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರಾದ, ಎ.ಕೆ. ಗುಪ್ತಾ, ವಿ.ಎಸ್. ಕೃಷ್ಣಕುಮಾರ್ ಭಾಗವಹಿಸಿದ್ದರು.



**ಕೆನರಾ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ಮಂಗಳವಾರ ಬ್ಯಾಂಕ್ ಹಾಗೂ ಬ್ರಿಕ್‌ವರ್ಕ್ ರೇಟಿಂಗ್ ಏಜೆನ್ಸಿ ನಡುವೆ ಪಾಲುದಾರಿಕೆ ಒಪ್ಪಂದ ನೆರವೇರಿತು. ಬ್ಯಾಂಕಿನ ಸಿಎಂಡಿ ಆರ್.ಕೆ. ದುಬೆ ಹಾಗೂ ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಕುಲಕರ್ಣಿ ಸಹಿ ಹಾಕಿದರು. ಎ.ಕೆ. ಗುಪ್ತಾ, ವಿ.ಎಸ್. ಕೃಷ್ಣಕುಮಾರ್ ಇದ್ದರು.**